**ದಿನಾಂಕ 15.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ** ವಾದಿ ಪರ NRK ವಕೀಲರಿಂದ

ನಾನು ಮೂಲತಃ ಅಮರಪುರು ಗ್ರಾಮದವನು. 2 ನೇ ಪ್ರತಿವಾದಿ ಶರಣಪ್ಪನ ಕುಟುಂಬದ ಬಗ್ಗೆ ನನಗ ಮಾಹಿತಿ ಇರುತ್ತದೆ. ಸ.ನಂ.85 ಮೂಲತಃ ಯಾರಿಗೆ ಸೇರಿತ್ತು ಎಂಬ ಬಗ್ಗೆ ವಿಚಾರ ಮಾಡಿರುವುದಿಲ್ಲ ಆದರೆ ಸದರಿ ಜಮೀನು ಶರಣಪ್ಪ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡಿದ ವರ್ಷದ ಜಮೀನು ಪಹಣಿಯನ್ನು ನೋಡಿರುತ್ತೇನೆ. ಸದರಿ ನಾನು ಖರೀದಿ ಮಾಡಿದ ವರ್ಷದಿಂದ ಹಿಂದಿನ ಪಹಣಿಗಳನ್ನು ನೋಡಿರುವುದಿಲ್ಲ. ಸದರಿ ಜಮೀನು ಕುರಿತು ಬೇರೆ ವಿಚಾರಣೆ ಮಾಡಿರುವುದಿಲ್ಲ.

ಸದರಿ ಜಮೀನು ಸ.ನಂ.85 ಮೊದಲು 2 ನೇ ಪ್ರತಿವಾದಿಯ ಸಿದ್ರಾಮಪ್ಪ ಮಾಲಿ ಪಾಟೀಲ ಇವರಿಗೆ ಸೇರಿದ್ದು ಅದನ್ನು ಸದರಿ ಸಿದ್ರಾಮಪ್ಪನು ವಾದಿ ಚಂದ್ರಪ್ಪನಿಗೆ ಸದರಿ ಜಮೀನನ್ನು ದಿನಾಂಕ 17.09.1953 ರಂದು ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಮಾಡಿದಾಗಿನಿಂದ ವಾದಿಯೇ ಸದರಿ ಜಮೀನಿನ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಖಾಸರ ಪಹಣಿಯಿಂದ ಹಿಡಿದು 2002 ವರೆಗೆ ಪಹಣಿಗಳಲ್ಲಿ ವಾದಿ ಚಂದ್ರಪ್ಪನ ಹೆಸರು ದಾಖಲು ಇತ್ತು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಚಂದ್ರಪ್ಪ ವಾದಿಗೆ ತಿಳಿಯದಂತೆ ದಾವ ಜಮೀನನ್ನು ಕಂದಾಯ ಅಧಿಕಾರಗಳ ಜೊತೆ ಶಾಮೀಲಾಗಿ ತನ್ನ ಹೆಂಡತಿ 1 ನೇ ಪ್ರತಿವಾದಿ ಹೆಸರಿಗೆ ಮುಟೇಶನ ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ಕಾನೂನು ಬಾಹಿರವಾಗಿ 1 ನೇ ಪ್ರತಿವಾದಿ ಹೆಸರಿನಿಂದ ಶರಣಪ್ಪ ತನ್ನ ಹೆಸರಿಗೆ ಮುಟೇಶನ ಮಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

ದಾವ ಜಮೀನಿಗೆ 2 ನೇ ಪ್ರತಿವಾದಿ ಶರಣಪ್ಪ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಮತ್ತು ವಅರಿಗೆ ಸದರಿ ಜಮೀನನ್ನು ಮಾರಾಟ ಮಾಡುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವ ಸ್ವತ್ತನ್ನು ನಿಜವಾದ ಮಾಲೀಕರಿಂದ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರದು ನಾನು ಖರೀದಿ ಮಾಡುವ ಕಾಲಕ್ಕೆ ಶರಣಪ್ಪ ಹೆಸರಿನಲ್ಲಿ ಪಹಣಿ ಇದುದ್ದರಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವ ಜಮೀನಿಗೆ ಕಾನೂನುಬದ್ದ ಮಾಲೀಕ ಅಲ್ಲದೇ ಇರುವುದರಿಂದ ನನಗೆ ಸದರಿ ದಾವ ಸ್ವತ್ತಿನಲ್ಲಿ ಮಾಲೀಕತ್ವದ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತು ನನ್ನ ಕಬ್ಜೆಯಲ್ಲಿ ಇರುವುದು ಕಾನೂನು ಬಾಹೀರ ಆಗಿರುತ್ತದೆ ಎಂದರೆ ಸರಿಯಲ್ಲ.

ಸದರಿ ದಾವ ಜಮೀನಿನಲ್ಲಿ ಮನೆ ಕಟ್ಟಲು ಜಮೀನನ್ನು ಕೃಷಿಯೇತರ ಜಮೀನಾಗಿ ಪರಿವರ್ತನೆ ಮಾಡಿರುದಿಲ್ಲ. ದಾವ ಸತ್ತಿನಲ್ಲಿ ಮನೆ ಕಟ್ಟಿರುವುದು ಕಾನೂನು ಬಾಹಿರ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸ್ವಾಧೀನತೆ ಕಾನೂನು ಬಾಹಿರ ಆಗಿರುವುದರಿಂದ ನಾನು ಸಾಧೀನದಲ್ಲಿ ಮುಂದುವರೆಯಲು ಹಕ್ಕುದಾರನು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.